ಶ್ರೀ ರೇವೂ ನಾಯಕ್ ಬೆಳಮಗಿ: 15 ದಿವಸಗಳಲ್ಲಿ ಆದೇಶವನ್ನು ಹೊರಡಿಸಿದ್ದೇವು. ವಿಶೇಷ ನೇಮಕಾತಿಯಡಿಯಲ್ಲಿ 194 ಹುದ್ದೆಗಳನ್ನು ಭರ್ತಿ ಮಾಡಲು ಅರ್ಜಿಯನ್ನು ಸ್ವೀಕರಿಸಿದ್ದೆವು. 77 ಹುದ್ದೆಗಳನ್ನು ಕೆಪಿಎಸ್‌ಸಿಯಿಂದ ಆಯ್ಕೆ ಮಾಡಿದ ಪಟ್ಟಿಯನ್ನು ಈ ತಕ್ಷಣವೆ ಬಿಡುಗಡೆ ಮಾಡುತ್ತೇವೆ. ಉಳಿದ 515 ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿದ್ದೇವೆ.

ಅಧ್ಯಕ್ಷರು: ಆಯಿತು.

ಸರ್ಕಾರಿ ಆಸ್ಪತ್ರೆಗಳಲ್ಲಿ ಔಷದಿಗಳ ಕೊರತೆ

43 (178) ಶ್ರೀ ಜಿ.ವಿ. ಶ್ರೀರಾಮರೆಡ್ಡಿ (ವಿಧಾನಸಭಾ ಸದಸ್ಯರು) (ಬಾಗೇಪಲ್ಲಿ): ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗೆ ಉತ್ತರಿಸುವರೆ ?

ಅ) ಬಹುತೇಕ ಸರ್ಕಾರಿ ಆಸ್ಪತ್ರೆಗಳಲ್ಲಿ ಔಷಧಿಗಳ ಕೊರತೆಯಿಂದಾಗಿ ಬಡ ರೋಗಿಗಳಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದಲ್ಲಿ, ಸರ್ಕಾರಿ ಆಸ್ಪತ್ರೆಗಳಿಗೆ ಅಗತ್ಯ ಔಷಧಿಗಳನ್ನು ಸರಬರಾಜು ಮಾಡಲು ಸರ್ಕಾರ ಕಲ್ಪಿಸಿದೆಯೇ ;

ಇ) ಹಾಗಿದ್ದಲ್ಲಿ, ಸರ್ಕಾರ ಈ ಬಗ್ಗೆ ಕೈಗೊಂಡ ಕ್ರಮವೇನು ?

ಶ್ರೀ ಆರ್. ಅಶೋಕ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ) ಬಹುತೇಕ ಆಸ್ಪತ್ರೆಗಳಲ್ಲಿ ಔಷಧಿಗಳಲ್ಲಿ ಕೊರತೆ ಇರುವುದಿಲ್ಲ. ಆದರೆ ಕೆಲವು ಆಸ್ಪತ್ರೆಗಳಲ್ಲಿ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆ.

ಆ) ಹೌದು. ಈ ದಿಸೆಯಲ್ಲಿ ಅಗತ್ಯ ಹಾಗೂ ಬೇಡಿಕೆಗಳಿಗನುಗುಣವಾಗಿ ಔಷಧಿ ಪೂರೈಕೆ ಮಾಡಲು ಸೂಕ್ತ ಕ್ರಮ ಕೈಗೊಳ್ಳಲಾಗಿದೆ.

ಇ) ಸರ್ಕಾರದ ಕೆಲವು ಆಸ್ಪತ್ರೆಗಳಲ್ಲಿ ಔಷಧಿಗಳ ಕೊರತೆ ಉಂಟಾಗಿರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದ್ದು, ಅಂತಹ ಆಸ್ಪತ್ರೆಗಳಿಗೆ ಬೇಕಾಗಿರುವ ಔಷಧಿಗಳು ಆ ಜಿಲ್ಲಾ ಉಗ್ರಾಣದಲ್ಲಿ ಇಲ್ಲದಿದ್ದ ಪಕ್ಷದಲ್ಲಿ ಔಷಧಿ ಲಭ್ಯವಿರುವ ಬೇರೆ ಜಿಲ್ಲೆಯ ಔಷಧ ಉಗ್ರಾಣಗಳಿಂದ ಪಡೆದು ಔಷಧಿ

1.00 P.M.

ಪೂರೈಸಿದ್ದು ಬಡ ರೋಗಿಗಳ ಚಿಕಿತ್ಸೆಗೆ ಯಾವುದೇ ತೊಂದರೆ ಉಂಟಾಗದಂತೆ ನಿರ್ವಹಣೆಗೆ ಕ್ರಮ ಕೈಗೊಳ್ಳಲಾಗಿದೆ.

ಈಗಾಗಲೇ ಇಲಾಖೆಯಲ್ಲಿರು 228 ಔಷಧಿ, ರಾಸಾಯನಿಕ ಮತ್ತು ಇತರೆ ವಸ್ತುಗಳಿಗೆ ದರಗುತ್ತಿಗೆ ಜೊತೆಗೆ 2006–08ನೇ ಸಾಲಿಗೆ 317 ಔಷಧಿಗಳಿಗೆ ಹೊಸ ದರಗುತ್ತಿಗೆ ಅಂತಿಮಗೊಳಿಸಿದ್ದು, ಸರ್ಕಾರಿ ಆಸ್ಪತ್ರೆಗಳಿಗೆ ಬೇಕಾಗಿರುವ ಎಲ್ಲಾ ಔಷಧಿಗಳನ್ನು ಪೂರೈಸುವ ಉದ್ದೇಶ ಹೊಂದಲಾಗಿದೆ. ಪ್ರತಿ ಆಸ್ಪತ್ರೆಗೂ ಈ ಹಿಂದೆ ಇದ್ದ ಪೂರೈಕೆಗಿಂತಲೂ 2 ಹಾಗೂ 3 ರಷ್ಟು ಹೆಚ್ಚು ಔಷಧಿ ಪೂರೈಸಲು ಅನುದಾನ ನಿಗಧಿಗೊಳಿಸಲಾಗಿದೆ. ಈ ಬಗ್ಗೆ ಈ ವರ್ಷ 26 ಕೋಟಿ ರೂ. ಗಳ ಹೆಚ್ಚಿನ ಅನುದಾನ ಒದಗಿಸಲಾಗಿದೆ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿರುವುದು ಸರಿಯಾದಂತಹ ಮಾಹಿತಿಯಲ್ಲ. ನಾನು ಕೇಳಿದ (ಅ) ಪ್ರಶ್ನೆಗೆ ಬಹುತೇಕ ಆಸ್ಪತ್ರೆಗಳಲ್ಲಿ ಇಲ್ಲ. ಕೆಲವು ಆಸ್ಪತ್ರೆಗಳಲ್ಲಿ ಇದೆ ಎಂದು ಉತ್ತರವನ್ನು ಕೊಟ್ಟಿದ್ದಾರೆ. ಇವರ ಸರ್ಕಾರದಲ್ಲಿ ಕಳೆದ ವರ್ಷದ ಬಜೆಟ್‌ನಲ್ಲಿ ಕೊಟ್ಟಿರುವುದು.. ಶೇಕಡ 60% ಆಸ್ಪತ್ರೆಗಳಿಗೆ ರಾಜ್ಯದಲ್ಲಿ ಕನಿಷ್ಟ 20% ಔಷಧಿಗಳು ಸರಬರಾಜಾಗುತ್ತಿಲ್ಲ ಎನ್ನುವಂತಹ ವರದಿಯನ್ನು ಇವರ ಸರ್ಕಾರದ ಮೂಲಕವೇ ಕೊಟ್ಟಿದ್ದಾರೆ. ಈಗ ಇಲ್ಲಿಗೆ ಬಂದು ಕೆಲವು ಆಸ್ಪತ್ರೆಗಳಲ್ಲಿ ಔಷಧಿಗಳು ಇಲ್ಲವೆಂದು ಉತ್ತರವನ್ನು ಕೊಡುತ್ತಿದ್ದಾರೆ. ಮಂತ್ರಿಗಳಾದವರು ಈ ರೀತಿಯಾಗಿ ಉತ್ತರವನ್ನು ಕೊಡುವುದು ಸರಿಯಲ್ಲ. ನಾನು ಕೇಳಿದ (ಆ) ಪ್ರಶ್ನೆಗೆ ಅಗತ್ಯವಿರುವುದನ್ನು ಸರಬರಾಜು ಮಾಡುತ್ತಿದ್ದೇವೆಂದು ಹೇಳಿದ್ದಾರೆ. ಇದಕ್ಕಿಂತ ಬೇಜವಾಬ್ದಾರಿ ಉತ್ತರ ಬೇರೆ ಇಲ್ಲ, ಏಕೆಂದರೆ ಸರ್ಕಾರವೇ ಹಲವಾರು ಸಂದರ್ಭಗಳಲ್ಲಿ ಹೇಳುತ್ತದೆ. ನಮ್ಮ ಕರ್ನಾಟಕ ರಾಜ್ಯದಲ್ಲಿರುವಂತಹ ಸರ್ಕಾರಿ ಆಸ್ಪತ್ರೆಗಳಿಗೆ ಒಂದು ವರ್ಷಕ್ಕೆ ಎಷ್ಟು ಔಷಧಿಗಳು ಅಗತ್ಯವಿದೆಯೆಂದು, ಹಾಗೂ ಶೇಕಡ 25 ರಷ್ಟು ಔಷಧಿಗಳು ಸರಬರಾಜಾಗುತ್ತಿಲ್ಲವೆನ್ನುವ ಬಗ್ಗೆ ಮಾಹಿತಿ ಸರ್ಕಾರಕ್ಕೆ ಇದೆ. ಹಲವಾರು ಕಡೆಗಳಲ್ಲಿ ಮಂತ್ರಿಗಳು ಹೇಳಿಕೆಯನ್ನು ಕೊಟ್ಟಿದ್ದಾರೆ. ಇದನ್ನು ನಾವು ಆಸ್ಪತ್ರೆಗಳಲ್ಲಿ ದಿನನಿತ್ಯವೂ ನೋಡುತ್ತಿದ್ದೇವೆ. ಡಾಕ್ಟರುಗಳು ಹೇಳುವುದನ್ನು ನಾವು ಕೇಳುತ್ತಿದ್ದೇವೆ. ಒಂದು ವರ್ಷಕ್ಕೆ ಎಷ್ಟು ಔಷಧಿಗಳು ಬೇಕೋ ಅದರಲ್ಲಿ ಶೇಕಡ 25ರಷ್ಟು ಔಷಧಿಗಳು ಸರಬರಾಜಾಗುತ್ತಿಲ್ಲ. ಅಗತ್ಯವಿರುವ ಔಷಧಿಗಳನ್ನು ಪೂರೈಸುತ್ತಿದ್ದೇವೆಂದು ಹೇಳುತ್ತಿದ್ದೇವೆ. ಸರ್ಕಾರಿ ಆಸ್ಪತ್ರೆಗಳಿಗೆ ಔಷಧಿಗಳಿಗೆ

ಬೇಕಾಗಿರುವ ಹಣ ಎಷ್ಟು ಬೇಕು, ಇಡೀ ರಾಜ್ಯದಲ್ಲಿರುವ ಸರ್ಕಾರಿ ಆಸ್ಪತ್ರೆಗಳಿಗೆ ಒಂದು ವರ್ಷಕ್ಕೆ ಎಷ್ಟು ಹಣ ಬೇಕು, ಅದನ್ನು ಕೇಳಿದರೆ ಇವರ ಹತ್ತಿರ ಆ ಮಾಹಿತಿ ಇಲ್ಲ. 26 ಕೋಟಿ ರೂ ಹೆಚ್ಚಿನ ಅನುದಾನವನ್ನು ಕೇಳಿದ್ದೇವೆಂದು ಇವರು ಹೇಳುತ್ತಾರೆ. ಇವತ್ತು ಕರ್ನಾಟಕ ರಾಜ್ಯದಲ್ಲಿರುವಂತಹ ಹಳ್ಳಿಗಾಡಿನಲ್ಲಿರುವಂತಹ ಪ್ರತ್ಯೇಕವಾದ ಆಸ್ಪತ್ರೆಗಳಿಗೆ ಇವರೇನಾದರೂ ಅಗತ್ಯವಿರುವಂತಹ ಸಂಪೂರ್ಣವಾದ ಔಷಧಿಯನ್ನು ಒದಗಿಸಬೇಕಾದರೆ, ಒಂದು ವರ್ಷಕ್ಕೆ ಸುಮಾರು 200 ಕೋಟಿ ರೂಗಳು ಬೇಕಾಗುತ್ತದೆ. ಈಗ ಸರ್ಕಾರ ಸದ್ಯಕ್ಕೆ ಕೊಡುತ್ತಿರುವುದು not even 50 crores. ಅದಕ್ಕೆ ಇನ್ನು ಹೆಚ್ಚಿಗೆ 26 ಕೋಟಿ ರೂಗಳನ್ನು ಕೇಳಿದ್ದೇವೆಂದು ಹೇಳುತ್ತಿದ್ದಾರೆ. ಇದರಿಂದಾಗಿ ಇಡೀ ರಾಜ್ಯದಲ್ಲಿ ಔಷಧಿಗಳ ಪರಿಸ್ಥಿತಿ ಗಂಭೀರವಾಗಿದೆ, ಇದರ ಬಗ್ಗೆ ಸರ್ಕಾರ ಸರಿಯಾದಂತಹ ಮಾಹಿತಿಯನ್ನು ತೆಗೆದುಕೊಂಡು ಮಾಡಬೇಕು. ನಾನು ಕೇಳುತ್ತಿರುವುದು ಇಷ್ಟೇ, ಎಲ್ಲಾ ಆಸ್ಪತ್ರೆಗಳಿಗೆ ಅಗತ್ಯವಿರುವಂತಹ ಔಷಧಿಗಳನ್ನು ನೀವು ಸಂಪೂರ್ಣವಾಗಿ ಪೂರೈಕೆ ಮಾಡಬೇಕು. ಅದನ್ನು ನೀವು ಮಾಡುತ್ತೀರೋ ಅಥವಾ ಇಲ್ಲವೋ? ಅದಕ್ಕೆ ಬೇಕಾಗಿರುವಂತಹ ಬಜೆಟ್ ಎಷ್ಟು? ಇದರ ಬಗ್ಗೆ ನಿಮ್ಮ ಹತ್ತಿರ ಮಾಹಿತಿ ಇದೆಯೇ? ಎಷ್ಟು ಆಸ್ಪತ್ರೆಗಳು ಇವೆ, ಈಗ ನೀವು ವಾಸ್ತವವಾಗಿ ಔಷಧಿಗಳಿಗೆ ಖರ್ಚು ಮಾಡುತ್ತಿರುವಂತಹದ್ದರ ಬಗ್ಗೆ ಹೇಳಬೇಕು. ಬೇರೆ ಸಲಕರಣೆಗಳನ್ನು ಸೇರಿಸಿ ಹೇಳಬೇಡಿ. ಬೆಡ್, ಬೆಡ್‌ಶೀಟ್, ಕಾಟನ್, ಬ್ಯಾಂಡೇಜ್, ಇವೆಲ್ಲವನ್ನು ಕೊಟ್ಟಿದ್ದೇವೆಂದು ಸೇರಿಸಿ ಹೇಳಬೇಡಿ. ನಾನು ನಿರ್ದಿಷ್ಟವಾಗಿ ಔಷಧಿಗಳ ಬಗ್ಗೆ ಕೇಳುತ್ತಿದ್ದೇನೆ. ನಮ್ಮ ರಾಜ್ಯದಲ್ಲಿರುವಂತಹ ಆಸ್ಪತ್ರೆಗಳಿಗೆ ಔಷಧಿಗಳಿಗಾಗಿ ಅಗತ್ಯವಿರುವಂತಹ ಔಷಧಿಗಳಿಗೆ ಎಷ್ಟು ಹಣ ಬೇಕೆಂದು ಅದರ ಬಗ್ಗೆ ನೀವು ಉತ್ತರವನ್ನು ಕೊಡಬೇಕು.

ಶ್ರೀ ಆರ್.ಅಶೋಕ್: ಮಾನ್ಯ ಅಧ್ಯಕ್ಷರೆ, ಇಡೀ ರಾಜ್ಯದಲ್ಲಿ ಔಷಧಿಗಳ ಕೊರತೆ ಇಲ್ಲ. ಈಗಾಗಲೇ ಔಷಧಿಗಳ ಕೊರತೆಯನ್ನು ಸರಿ ಮಾಡಬೇಕೆಂದು ಕಳೆದ ಸಾಲಿನ ಬಜೆಟ್‌ನಲ್ಲಿ 43 ಕೋಟಿ ರೂಗಳು ಇತ್ತು. ಇನ್ನು ಅಡಿಷನಲ್ ಆಗಿ 28 ಕೋಟಿ ರೂಗಳು ಗ್ರಾಂಟ್‌ನ್ನು ತೆಗೆದುಕೊಂಡುಬಿಟ್ಟಿದ್ದೇವೆ. ಅವರು ಕೊಡುತ್ತಾರೆ ಅಂತ, ನಾವು ಅನುದಾನವನ್ನು ಕೇಳಲಿಲ್ಲ. ಅನುದಾನವನ್ನು ತೆಗೆದುಕೊಂಡುಬಿಟ್ಟಿದ್ದೇವೆ. ಕಳೆದ ಬಾರಿ ನಮ್ಮ ಪಾಲಿಸಿ ಏನಿತ್ತು.

ಶ್ರೀ ಕೆ.ಆರ್. ರಮೇಶ್‌ಕುಮಾರ್: ಮಾನ್ಯ ಆಧ್ಯಕ್ಷರೆ, ಈ ಉತ್ತರಗಳನ್ನು ಇವರ departmentನವರು ಕೊಡುವುದಿಲ್ಲ. ಯಾರು ಮಂತ್ರಿಗಳಾಗಿದ್ದವರು ಅಗತ್ಯವಿರುವ ಮಾಹಿತಿಯನ್ನು ಕೊಡಬೇಕಾಗುತ್ತದೆ. ಇಲ್ಲಿ ವಾಸ್ತವಾಂಶವೇನೆಂದರೆ, ಈ ಸರ್ಕಾರ, ಆ ಸರ್ಕಾರವೆನ್ನುವಂತಹ ಪ್ರಶ್ನೆಯಲ್ಲ. ನಮ್ಮ ವ್ಯವಸ್ಥೆಯಲ್ಲಿ ಸರ್ಕಾರಿ hospitals, ಈ Medical stores ಎದರುಬದಿರಿಗೆ ಇರುತ್ತದೆ. ಯಾವ ಔಷಧಿಯು ಬಡವರಿಗೆ ಬೇಕಾಗಿದ್ದರೂ ಕೂಡ ಇವರು slipನ್ನು ಬರೆದುಕೊಡುವುದು ಸಹಜ. ಅದು ಅವರಿಗೊಂದು ರೀತಿಯಲ್ಲಿ understanding ಇರುತ್ತದೆ. ಈ Physicians sample ಕೊಡುತ್ತಾರಲ್ಲಾ ಅವುಗಳನ್ನೂ ಸಹ ಮಾರಿಕೊಳ್ಳುತ್ತಾರೆ, ಆಮೇಲೆ ಈ ಡಾಕ್ಟರ್ ನೇರವಾಗಿ ದುಡ್ಡು ತೆಗೆದುಕೊಳ್ಳುವುದಕ್ಕೆ ಬರುವುದಿಲ್ಲ. ಆ ದುಡ್ಡು, ಇಂಜೆಕ್ಷನ್ಸ್ ದುಡ್ಡು ಇವೆಲ್ಲವನ್ನೂ ಡಿ.ಗ್ರೂಪ್ ಸರ್ವೆಂಟ್ಸ್ ಕೈಗೆ ಕೊಡಬೇಕು. ಅವನು ಸಂಜೆ ಟೋಟಲ್ ಕಲೆಕ್ಷನ್ಸ್ ಅನ್ನು ಡಾಕ್ಟರ್ಸ್‌ಗೆ ಅವರಿಗೆ ಇವರಿಗೆ ಎಲ್ಲರಿಗೂ ಕೊಡುತ್ತಾನೆ. ಈಗ ನೀವು ಕೊಡುತ್ತಿರುವ ಉತ್ತರ earnest ಆಗಿ ನಿಮ್ಮ ಇಲಾಖೆಯವರು ಏನು ಸಪ್ಲೈ ಮಾಡಿರುತ್ತಾರೆ ಆ information ತಾವು ಕೊಡುತ್ತೀರಿ. ಅವರು ಹೇಳುತ್ತಿರುವಂಥದ್ದು ವಾಸ್ತವಾಂಶ. ನಾನು ಈಗ ಒಬ್ಬ ಬಡವ. ನನಗೆ ಒಂದು ಕೆಟ್ಟ ಕಾಯಿಲೆ ಬಂದಿದೆ. ಪ್ರೈವೇಟ್ ನರ್ಸಿಂಗ್ ಹೋಮ್‌ಗೆ ಹೋಗಲು ನನಗೆ ಶಕ್ತಿಯಿಲ್ಲ. ಅಲ್ಲಿಗೆ ಹೋದರೆ ಇರುವ ಔಷಧಿಯನ್ನು ಕೊಡಲಿಕ್ಕೂ ಸಹ ಅವರು ಒಂದು ಸ್ಲಿಪ್ ಬರೆದು ಕೊಡುತ್ತಾರೆ. ಇದಕ್ಕೆ ವಿಜಿಲೆನ್ಸ್ ಬೇಕಾಗಿದೆ. ಅಂತಹ ಡಾಕ್ಟರುಗಳನ್ನು ಹಿಡಿಯಬೇಕಾಗುತ್ತದೆ. ಅವರಿಗೆ ಶಿಕ್ಷೆ ಆಗಬೇಕಾಗುತ್ತದೆ. ಆಡಳಿತದಲ್ಲಿ .. ನಿಮ್ಮ ಡಿ.ಹೆಚ್.ಓ. ಗಳಿದ್ದಾರೆ. ಅವರು **ಸೆಂಟ್ರಲೈಸ್ಡ್** ಚೆಕಿಂಗ್ ಮಾಡುತ್ತಾರೆ. ತಿಂಗಳಲ್ಲಿ ಎಲ್ಲಾ ಆಸ್ಪತ್ರೆಗಳಿಗೆ ಒಂದೆರಡು ರೌಂಡ್ ಹೋಗಿ ಆ ಡಾಕ್ಟರುಗಳು ಕೊಡುವ ಹಣದಿಂದ ಅವರು ಜೀವನ ಮಾಡುತ್ತಾರೆ. ಹೆಡ್ ಆಫೀಸ್‌ನಲ್ಲಿ, ಡೈರೆಕ್ಟರ್ ಆಫೀಸ್‌ನಲ್ಲಿ ಈ ಡಿ.ಹೆಚ್.ಒ.ಗಳು ಕೊಡುವ ಪೂಲ್‌ಗಳಿಂದ ಇವರು ಬದುಕುವುದು. ನಾನು ಈ ಸರ್ಕಾರದಲ್ಲಿ ನೀವು ಮಂತ್ರಿಯಾಗಿದ್ದೀರಿ ಎಂದು ಹೇಳುತ್ತಿಲ್ಲ. Let me make it very very clear. ಇದು ವರ್ಷಾನುಗಟ್ಟಲೆಯಿಂದ ನಡೆದುಕೊಂಡು ಬಂದಿದೆ. ನೀವು ಇನ್ನೂ ಚಿಕ್ಕವಯಸ್ಸಿನವರು ಬಹಳ ಉತ್ಸಾಹದಿಂದ ಇದ್ದೀರಿ. ನೀವೇನಾದರೂ ದೊಡ್ಡ ಮನಸ್ಸು ಮಾಡುವುದಾದರೆ ಆ ವರ್ಗದ ಜನರ ಮೇಲೆ ನಿಮಗೆ ಏನಾದರೂ ವಾತ್ಸಲ್ಯ ಇದ್ದರೆ you will have to act very

boldly, ಈ reply ಓದಲಿಕ್ಕೆ ಹೋಗಬೇಡಿ. ಇಲಾಖೆಯವರು ಕೊಟ್ಟ ಉತ್ತರವನ್ನು ಓದದೆ ಅದನ್ನು ತೆಗದು ಬಿಸಾಕಿ surprising inspections ಮಾಡಿ, ಸಿಕ್ಕಿದವರನ್ನೆಲ್ಲಾ ಅಲ್ಲಲ್ಲೇ ಬಲಿ ಹಾಕುವುದಾದರೆ you would be creating a history. ಜನರ ಮನಸ್ಸಿನಲ್ಲಿ ನೀವು ಉಳಿಯುತ್ತಿರಿ. ಇಲ್ಲದೇ ಹೋದರೆ ನೂರಾರು ಜನ ಮಂತ್ರಿಗಳು ಬಂದು ಹೋಗುವ ಹಾಗೆ ನೀವು ಕೂಡ come and go ಆಗುತ್ತೀರಿ ಅಷ್ಟೆ. Don`t read that reply, because it is not convincing.

ಶ್ರೀ ಎನ್.ಯೋಗೀಶ್ ಭಟ್: ಮಾನ್ಯ ಅಧ್ಯಕ್ಷರೆ, ಕಳೆದ ಎರಡು ವರ್ಷಗಳ ಹಿಂದೆ 40.00 ಲಕ್ಷ ರೂಪಾಯಿಗಳ ಔಷಧಿಯನ್ನು ಈ ಪಿ.ಹೆಚ್.ಸಿ.ಗಳಿಗೆ ಹೋಗುವಂತಹದ್ದನ್ನು ಡಿ.ಹೆಚ್.ಒ. ಆಫೀಸ್‌ಗಳಲ್ಲಿ ಅನಧಿಕೃತವಾಗಿ ಗೋಡೌನ್‌ನಲ್ಲಿ ಇಟ್ಟುಕೊಂಡಂಥ ಔಷಧಿಯನ್ನು ಪತ್ತೆ ಹಚ್ಚಿರುವುದನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. ಎಲ್ಲಿ ಬಡರೋಗಿಗಳಿಗೆ ಸಿಗಬೇಕಾದ ಔಷಧಿ ಅಲ್ಲಿ ಸಿಗುತ್ತಿಲ್ಲ. ಎರಡನೆಯದಾಗಿ ಬಜೆಟ್‌ನಲ್ಲಿ ಹಣ ಬಿಡುಗಡೆ ಮಾಡಲಾಗಿದೆಯೆಂದು ತಾವೇ ಹೇಳಿದ್ದೀರಿ. ತಾವು ಹಣವನ್ನು ಬಿಡುಗಡೆ ಮಾಡಿರಬಹುದು. ಈ ಲಾಜಿಸ್ಟಿಕ್ ಸೊಸೈಟಿಗಳ ಫಂಕ್ಷನ್ಸ್ ಅನ್ನು ಸ್ವಲ್ಪ ತಾವು ವಾಚ್ ಮಾಡಬೇಕು. ಉದಾಹರಣೆಗೆ ನಮ್ಮ ಜಿಲ್ಲಾ ಆಸ್ಪತ್ರೆಗಳಲ್ಲಿ ಒಂದು ಕೋಟಿ ರೂ.ಗಳಷ್ಟು ಔಷಧಿ ಸರಬರಾಜು ಆಗಬೇಕಾಗಿತ್ತು. ನಲವತ್ತು ಲಕ್ಷ ರೂ.ಗಳಷ್ಟು ಔಷಧಿಗಳು ಕೂಡ ಸರಬರಾಜು ಆಗಿಲ್ಲ. ಇಲ್ಲಿ ಬಜೆಟ್‌ನಲ್ಲಿ ಹಣ ಬಿಡುಗಡೆಯಾದರೂ ಸಹ ಅವರು ಅಲ್ಲಿ ಹಣವನ್ನು ಬಿಡುಗಡೆ ಮಾಡಿಲ್ಲ. ಇವರು ಹಾಕಿರುವ ಆರ್ಡರ್ ಒಂದು, ಅವರು ಸಪ್ಲೈ ಮಾಡಿರುವುದು ಇನ್ನೊಂದು. ಈ ನಿಟ್ಟಿನಲ್ಲಿ ನಿಜವಾದ ಬಡರೋಗಿಗಳಿಗೆ ಆಸ್ಪತ್ರೆಗಳಲ್ಲಿ ಔಷಧಿಗಳು ಕೊರತೆಯಾಗುತ್ತಿದೆ. ಈ ಹಿನ್ನೆಲೆಯಲ್ಲಿ ತಾವು ವಿಶೇಷವಾಗಿ ಒಂದು ವಿಜಿಲೆನ್ಸ್ ಅನ್ನು ಇಂತಹ ಲಾಜಿಸ್ಟಿಕ್ ಸೊಸೈಟಿಯಲ್ಲಿ ಕೂಡ ಮಾಡಬೇಕೆಂದು ತಮ್ಮಲ್ಲಿ ವಿನಂತಿಸುತ್ತಿದ್ದೇನೆ.

ಶ್ರೀ ಆರ್.ಅಶೋಕ್(ಆರೋಗ್ಯ ಸಚಿವರು): ಈಗ ಸನ್ಮಾನ್ಯ ರಮೇಶ್‌ಕುಮಾರ್‌ರವರು ಹೇಳಿರುವಂತಹದ್ದು ವಾಸ್ತವಿಕ ವಿಷಯವಾಗಿದೆ ಅದನ್ನು ನಾನು ಸಹ ಒಪ್ಪುತ್ತೇನೆ. ಅದರ ಬಗ್ಗೆ ನನ್ನ ಭೇದವೇನೂ ಇಲ್ಲ. ಸರ್ಕಾರ ಔಷಧಿ ಕೊಡುವುದರಲ್ಲಿ ಸ್ವಲ್ಪ ಕೊರತೆ ಮಾಡಿದರೆ ಅಥವಾ ಔಷಧಿ ಹೆಚ್ಚಿಗೆ ಕೊಟ್ಟರೂ ಸಹ ಜನರಿಗೆ ಸರಿಯಾಗಿ ರೀಚ್ ಆಗುತ್ತಿಲ್ಲವೆಂಬುದು ನನ್ನ

ಭಾವನೆ. ನಾನು ಈ ಖಾತೆ ವಹಿಸಿಕೊಂಡ ಮೇಲೆ ಫಸ್ಟ್ ಇದೇ ಒಂದು ಮೂಲಭೂತವಾದ ಪ್ರಶ್ನೆ ನನಗೆ ಕಂಡು ಬಂದಿದ್ದು. ಸರ್ಕಾರ ಬಜೆಟ್ಟಿನಲ್ಲಿ ಹೋದ ಸಾರಿ 43.00 ಕೋಟಿ ರೂ.ಗಳನ್ನು ತೋರಿಸಿತ್ತು. ಆ 43.00 ಕೋಟಿ ಆ ಬಡವನಿಗೆ ದೊರೆಯುತ್ತಿರಲಿಲ್ಲ, ಆ ವಿಷಯ ನನಗೆ ಗೊತ್ತಿದೆ. ಅದಕ್ಕೆ ಈ ಸಾರಿ ನಾನು ಬಂದ ಮೇಲೆ ಈ ಚೀಟಿ ಬರೆದುಕೊಡುವಂತಹ ಲಾಬಿ ಏನಿದೆ ಈ ಚೀಟಿ ಬರೆದುಕೊಡುವಂತಹ ಸಂಸ್ಕೃತಿ ನಮ್ಮ ಡಾಕ್ಟರ್ಸ್‌ಗೆ ಅಭ್ಯಾಸವಾಗಿ ಹೋಗಿದೆ. ನಮ್ಮ ಸರ್ಕಾರ ಔಷಧಿಗಳನ್ನು ಸಪ್ಲೈ ಮಾಡಿದ್ದು ಅದು ಗೋಡೌನ್‌ನಲ್ಲಿದ್ದರೂ ಸಹ ಔಷಧಿಗಳನ್ನು ಕೊಡುವಂತಹ ಪ್ರವೃತ್ತಿ ನಮ್ಮ ಡಾಕ್ಟರ್‌ಗಳಿಗೆ ಇರಲಿಲ್ಲ. ಚೀಟಿ ಬರೆದುಕೊಡುವುದು. ತಾವು ಹೇಳಿದಿರಲ್ಲಾ, ಎದುರುಗಡೆ ಯಾವನೋ ಒಬ್ಬ ಅಂಗಡಿಯವನ ಜೊತೆಗೆ ಒಂದು ಲಾಬಿ ಮಾಡಿಕೊಂಡಿರುತ್ತಾರೆ, ಈ ಪ್ರವೃತ್ತಿ ನಮ್ಮಲ್ಲಿದೆ. ಅದಕ್ಕೋಸ್ಕರವೇ ನಾನು ಬಂದ ಮೇಲೆ ನಲವತ್ತು ಬಾರಿ surprise visit ಮಾಡಿದ್ದೇನೆ. ಯಾವುದೇ protocol ನಾನು ಬರುತ್ತೇನೆಂದು ಎಲ್ಲಿಯೂ ಹೇಳುತ್ತಿರಲಿಲ್ಲ. ಹಾಗೆಯೇ surprise visit ಮಾಡಿದ್ದೇನೆ. ಸುಮಾರು 40ಕ್ಕೂ ಮೇಲ್ಪಟ್ಟು ಅಧಿಕಾರಿಗಳನ್ನು ಸಸ್ಪೆಂಡ್ ಮಾಡಿದ್ದೇನೆ. ನಿನ್ನೆಯೂ ಸಹ ಗುಲ್ಬರ್ಗಾದಲ್ಲಿರುವ ಚೀಫ್ ಫಾರ್ಮಾಸಿಸ್ಟ್ ರವರನ್ನು ಸಸ್ಪೆಂಡ್ ಮಾಡಿದ್ದೇನೆ. ನಿನ್ನೆ ಹಾವೇರಿಗೆ ಹೋಗಿದ್ದೆ, ಸರಿಯಾಗಿ ಔಷಧಿಗಳನ್ನು ಸರಬರಾಜು ಮಾಡಿಲ್ಲವೆನ್ನುವ ಕಾರಣಕ್ಕೆ ಹಾಗೆ ಮಾಡಿದ್ದೇನೆ. ಮೊನ್ನೆ ಇಬ್ಬರನ್ನು ಸಸ್ಪೆಂಡ್ ಮಾಡಿದ್ದೇನೆ.

ಶ್ರೀ ಕೆ.ಆರ್.ರಮೇಶ್‌ಕುಮಾರ್: ಮಾನ್ಯ ಮಂತ್ರಿಗಳೆ, I want you help you, ದಯಮಾಡಿ ಕೇಳಿ. ಈ ಸಸ್ಪೆನ್‌ಷನ್ ಇದೆಯೆಲ್ಲಾ., ಮಾನ್ಯ ರೆಡ್ಡಿಯವರೇ ನಿಮ್ಮ ಪ್ರಶ್ನೆಗೆ ಉತ್ತರ ಹೇಳುತ್ತಾರೆ.

ಶ್ರೀ ಆರ್.ಅಶೋಕ್: ಮಾನ್ಯ ಶಾಸಕರುಗಳು ನೀವಿಬ್ಬರೂ ಒಂದೇ ಜಿಲ್ಲೆಯವರು.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಮಾನ್ಯ ಸಚಿವರು, ನೀವು ದಯವಿಟ್ಟು ಒಂದರ್ಥ ಮಾಡಿಕೊಳ್ಳಿ. ನೀವು ಔಷಧಿಗಳನ್ನು, ಮೂಲ ಪ್ರಶ್ನೆ ಕೇಳಿದ್ದೇನೆ, ಸರ್ಕಾರಿ ಆಸ್ಪತ್ರೆಗಳಿಗೆ ನೀವು ಏನು ಔಷಧಿಗಳನ್ನು ಕೊಡುತ್ತಿದ್ದೀರಿ, ಅದು 25% ಗಿಂತ ಹೆಚ್ಚಿಗೆ ಹೋಗುತ್ತಿಲ್ಲ. ಅದಕ್ಕೆ ಇವತ್ತೇನಾಗುತ್ತಿದೆ ಎಂದರೆ ಆ 25% ಔಷಧಿಗಳು ಜನಕ್ಕೆ ಸೇರುತ್ತಿಲ್ಲವೆಂದು ಮಾನ್ಯ ರಮೇಶ್ ಕುಮಾರ್‌ರವರು ಹೇಳುತ್ತಿರುವಂಥಾದ್ದು. ನಾನು ಹೇಳುತ್ತಿರುವಂಥಾದ್ದು ಏನೆಂದರೆ, ಕೊಡುತ್ತಿರುವ

25% ಔಷಧಿ ಜೊತೆಗೆ ಇನ್ನು 75% ಔಷಧಿಗಳು ಸಹ ಹೋಗುತ್ತಿಲ್ಲ. ಅದಕ್ಕೆ ಬೇಕಾಗುವ ಬಜೆಟ್ ಸಹ ನಿಮ್ಮ ಹತ್ತಿರ ಇಲ್ಲ. ಅದಕ್ಕೆ ನೀವು ಏನು ಕೊಡುತ್ತಿದ್ದೀರಿ ಅದು ರಮೇಶ್‌ಕುಮಾರ್ ಹೇಳಿದ್ದು ಸತ್ಯ. ನೀವು ಏನು ಕೊಡುತ್ತಿದ್ದೀರಿ ಅದರಲ್ಲಿ ಹೆಚ್ಚಿನ ಭಾಗ ಡಾಕ್ಟರ್, ಮೆಡಿಕಲ್ ಸ್ಟೋರ್ಸ್ ಇನ್ನೂ ಯಾರ್‍ಯಾರಿಗೋ ಹೋಗುತ್ತಿದೆ. ನನ್ನ ಪ್ರಶ್ನೆ ಏನೆಂದರೆ ನಿಮ್ಮ ಸರ್ಕಾರದ ಯೋಜನೆಯೇ ಸಾಮಾನ್ಯ ಜನರ ಆರೋಗ್ಯಕ್ಕೆ ವ್ಯವಸ್ಥೆ ಮಾಡುವುದರ ಪರವಾಗಿಲ್ಲ ಎಂದು ನಿಮ್ಮ ಅಂಕಿ ಅಂಶಗಳನ್ನು ನೀವೇ ಹೇಳುತ್ತಿದ್ದೀರಿ. 43.00 ಕೋಟಿ ರೂ.ಗಳಿದ್ದರೆ, ದಿವಸಕ್ಕೆ ಆಸ್ಪತ್ರೆಗಳಿಗೆ ಬರುವ ನಿಮ್ಮ ರೋಗಿಗಳ ಸಂಖ್ಯೆ ಎಷ್ಟು? ಅದಕ್ಕೆ ಎಷ್ಟು ಹಣ ಬೇಕು? ಅದರ ಲೆಕ್ಕ ನಿಮ್ಮ ಹತ್ತಿರವಿದೆಯೇ? ನನಗೆ ಅದಕ್ಕೆ ನೀವು ಮೊದಲು ಉತ್ತರ ಹೇಳಬೇಕು.

ಶ್ರೀ ಆರ್.ಅಶೋಕ್: ಮಾನ್ಯ ರಮೇಶ್‌ಕುಮಾರ್‌ರವರ ಪ್ರಶ್ನೆಗೆ ಉತ್ತರ ನೀಡಿ ಈಗ ನಾನು ತಮಗೆ ಉತ್ತರಿಸುತ್ತಿದ್ದೇನೆ. ಈ ಸಿಸ್ಟಮ್ ಅನ್ನು ಸರಿಪಡಿಸಬೇಕೆಂದೇ ಈಗ ಉಚಿತವಾಗಿ ಔಷಧಿಗಳು ದೊರೆಯುವಂತಹ open glass ಮಳಿಗೆಗಳನ್ನು ಎಲ್ಲಾ ಜಿಲ್ಲಾ ಕೇಂದಗಳಲ್ಲಿ ಮಾಡಿದ್ದೇವೆ. ಮೊದಲು ನಾವು ನೀಡಿದಂತಹ ಔಷಧಿಗಳು ಗೋಡೌನ್‌ಗೆ ಹೋಗುತಿತ್ತು . ಅಲ್ಲಿಂದ ನೇರವಾಗಿ ಎಲ್ಲಿಗೆ ಹೋಗುತ್ತಿತ್ತು ಎನ್ನುವ ಪ್ರಶ್ನೆ ಬೇರೆ. ಆದರೆ ಈಗ ನಾವು ಕೊಡುವ ಔಷಧಿಗಳು open storageನಲ್ಲಿ glass house ನಲ್ಲಿಡಬೇಕು. ನೀವು ಎಲ್ಲೇ ಹೋಗಿ ಪರೀಕ್ಷೆ ಮಾಡಿ. ಯಾವುದೇ ಜಿಲ್ಲಾ ಕೇಂದ್ರಕ್ಕೆ ನೀವು ಹೋಗಿ. ಎಲ್ಲಾ ಜಿಲ್ಲಾ, ತಾಲ್ಲೂಕು ಕೇಂದ್ರಗಳಲ್ಲಿ ನೀವು ಹೋಗತಕ್ಕಂಥ ಆಸ್ಪತ್ರೆಗಳ ಮುಂಭಾಗದಲ್ಲಿ ಉಚಿತವಾಗಿ ಔಷಧಿ ದೊರೆಯುವಂತಹ ಗೋಡೌನ್ ಅನ್ನು ಮಾಡಿಸಿದ್ದೇನೆ ಮತ್ತೆ transparent ಆಗಿ ಔಷಧಗಳು ಕಾಣುವ ರೀತಿ ಸುತ್ತಲೂ ಗ್ಲಾಸ್ ಹಾಕಿದ್ದೇವೆ. ನೀವು ರಾಜ್ಯದ ಯಾವುದೇ ಭಾಗದಲ್ಲಿ ಹೋಗಿ ನೋಡಿ. ಈ ಸರ್ಕಾರ ಬಂದ ಮೇಲೆ ನಾವು ಮಾಡಿದ್ದೇವೆ. ನೀವು ಪರೀಕ್ಷೆ ಮಾಡಿ ನೋಡಿ.

ಡಾ: ಶರಣ ಪ್ರಕಾಶ ರುದ್ರಪ್ಪ ಪಾಟೀಲ್: ಮಾನ್ಯ ಸಚಿವರೆ, ಅದು ಇನ್ನೂ ಕಾರ್ಯಗತವಾಗಿಲ್ಲ.

ಶ್ರೀ ಆರ್.ಅಶೋಕ್: ಮಾನ್ಯ ಅಧ್ಯಕ್ಷರೆ, ಎಲ್ಲಾ ಕಡೆ ಜಿಲ್ಲಾ ಆಸ್ಪತ್ರೆಗಳಲ್ಲಿ ಈ ರೀತಿಯಾಗಿ ಔಷಧಿಗಳನ್ನು ಸ್ಟಾಕ್ ಮಾಡುವುದನ್ನು ನಾವು ಮಾಡಿದ್ದೇವೆ. ಎರಡನೆಯದಾಗಿ ಮಾನ್ಯ ಶ್ರೀರಾಮರೆಡ್ಡಿಯವರು ಮೂಲತ: ನೀವು ಬಜೆಟ್

ಅನ್ನೇ ಅದಕ್ಕೆ ಅಲಾಟ್ ಮಾಡಿಲ್ಲವೆಂದು ಹೇಳಿದ್ದಾರೆ. ಈ ಬಾರಿಯ ಬಜೆಟ್‌ನಲ್ಲಿ ನಾವು ಮಾಡಿರುವಂಥಹದ್ದು, ಕಳೆದ ಮೂರು ತಿಂಗಳುಗಳಿಂದ ಮಾಡಿದ್ದೇವೆ. ಮೊದಲೆಲ್ಲಾ ಪ್ರಾಥಮಿಕ ಆರೋಗ್ಯ ಕೇಂದ್ರವೆಂದರೆ 30,000 ರೂ.ಗಳ ಅನುದಾನವನ್ನು ಕೊಡುತ್ತಿದ್ದೆವು. ಇದನ್ನು ಈಗ ವರ್ಷಕ್ಕೆ 30,000 ರೂ.ಗಳಿಂದ 60,000 ರೂ.ಗಳಿಗೆ ಹೆಚ್ಚು ಮಾಡಿದ್ದೇನೆ. ಪಿ.ಹೆಚ್.ಯುಗೆ 75,000 ರೂ. ಗಳಿಂದ 1.00 ಲಕ್ಷ ರೂ.ಗಳಿಗೆ ಏರಿಕೆ, ಸಿ.ಎಸ್.ಸಿ.ಗೆ 2.00 ಲಕ್ಷ ರೂ. ಗಳಿಂದ 3.00 ಲಕ್ಷರೂ.ಗಳಿಗೆ ಏರಿಕೆ, ತಾಲ್ಲೂಕು ಆಸ್ಪತ್ರೆಗಳಿಗೆ 2.00 ಲಕ್ಷ ರೂ.ಗಳಿಂದ 6.00 ಲಕ್ಷರೂ.ಗಳಷ್ಟು ಹೆಚ್ಚಿಗೆ ಮಾಡಲಾಗಿದೆ. ಅದೇರೀತಿ 100 ಬೆಡ್ಸ್ ಇರುವಂಥ ಆಸ್ಪತ್ರೆಗಳಿಗೆ 20.00 ಲಕ್ಷ ರೂ.ಗಳು, 150 ಬೆಡ್ಸ್ ಇರುವ ಆಸ್ಪತ್ರೆಗಳಿಗೆ 30.00 ಲಕ್ಷ ರೂ.ಗಳು, 200 ಬೆಡ್ಸ್ ಇರುವ ಆಸ್ಪತ್ರೆಗಳಿಗೆ 40.00 ಲಕ್ಷರೂ.ಗಳು , 500 ಬೆಡ್ಸ್ ಇರುವ ಆಸ್ಪತ್ರೆಗಳಿಗೆ 1.00 ಕೋಟಿ ರೂ.ಗಳಷ್ಟು , 1000 ಬೆಡ್ಸ್ ಇರುವ ಆಸ್ಪತ್ರೆಗಳಿಗೆ 2.00 ಕೋಟಿ ರೂ.ಗಳನ್ನು ಕೊಡಬೇಕೆಂದು ಮಾಡಿದ್ದೇವೆ. ಮೊದಲು ಈ ಪಾಲಿಸಿ ಇರಲಿಲ್ಲ. ಯಾರು ಪ್ರಭಾವ ಬೀರುತ್ತಾರೋ, ಯಾರು ಮಂತ್ರಿಗಳ, ಎಂ.ಎಲ್.ಎ.ಗಳು ಪ್ರಭಾವ ಬೀರಿದರೆ ಅವರಿಗೆ ಬಜೆಟ್ ಅಲೋಕೇಷನ್ ಆಗುತ್ತಿತ್ತು. ಈಗ ಆ ರೀತಿ ಇಲ್ಲ, ಇಡೀ ರಾಜ್ಯದ ಎಲ್ಲಾ ಆಸ್ಪತ್ರೆಗಳಿಗೆ ಒಂದೇ ನಿಯಮ. ಎಷ್ಟು ಬೆಡ್ಸ್ ಇದೆ ಎನ್ನುವುದರ ಮೇಲೆ ಔಷಧಿಗಳ ವಿತರಣೆಯನ್ನು ಮಾಡಿದ್ದೇವೆ. almost all double ಕಳೆದ ವರ್ಷದ ಬಜೆಟ್‌ಗಿಂತ ದುಪ್ಪಟ್ಟು ಔಷಧಿಯನ್ನು ಕೊಡುವಂಥ ವ್ಯವಸ್ಥೆಯನ್ನು ನಾವು ಮಾಡಿದ್ದೇವೆ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ನಾನು ಕೇಳಿದ್ದು ಬೇರೆ, ನೀವು ಕೊಟ್ಟಿರುವ ಹಣ ಸರಿ, ಆದರೆ ಅವಶ್ಯಕತೆ ಎಷ್ಟು? ಈಗ ಒಂದು ವರ್ಷಕ್ಕೆ 30,000 ರೂ. ಗಳಿಂದ 60,000 ರೂಗಳಿಗೆ ಅನುದಾನವನ್ನು ಹೆಚ್ಚು ಮಾಡಲಾಗಿದೆಯೆಂದು ಹೇಳುತ್ತಿದ್ದೀರಿ.

ಅಧ್ಯಕ್ಷರು:– ಮಾನ್ಯ ರೆಡ್ಡಿಯವರೇ ಬಹಳ ಸಮಯವಾಯಿತು. ಇನ್ನೂ ಒಂದು ಪ್ರಶ್ನೆ ಇದೆ. ಒಂದೂ ಕಾಲು ಗಂಟೆ ಆಯಿತು.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಮಾನ್ಯ ಸಚಿವರು ನೀವು 30,000 ರೂ.ಗಳಿಂದ 60,000 ರೂ., 1.00 ಲಕ್ಷರೂ.ಗಳಿಂದ 2.00 ಲಕ್ಷ ರೂ. ಮಾಡಿದ್ದೇವೆಂದು ಹೇಳುತ್ತಿದ್ದೀರಿ, ನಿಜ, ಆದರೆ ನನ್ನ ಪ್ರಶ್ನೆ ಏನೆಂದರೆ ಒಂದು ವರ್ಷಕ್ಕೆ ನೀವು 30,000 ದಿಂದ 60,000 ರೂ.ಗಳ ಪ್ರಶ್ನೆ ಒಂದು

ಕಡೆಯಾದರೆ, ಆ ಆಸ್ಪತ್ರೆಗಳಿಗೆ ಬರತಕ್ಕಂಥ ರೋಗಿಗಳ ಸಂಖ್ಯೆ ಮತ್ತು ಅದಕ್ಕೆ ಬೇಕಾಗುವ ಅಗತ್ಯತೆ ಎಷ್ಟು? ಅದಕ್ಕೆ ಪೂರಕವಾಗಿ, ಪ್ರಮಾಣವಾಗಿ ಹಣವನ್ನು ಹಂಚುತ್ತಿರುವಿರಾ ಎಂಬುದು ನನ್ನ ಪ್ರಶ್ನೆ. ಆ ರೀತಿ ಹಣ ಹಂಚಿಕೆಯಾಗುತ್ತಿಲ್ಲ.

ಅಧ್ಯಕ್ಷರು:– ಆಯಿತು. ಈ ಪ್ರಶ್ನೆಗೆ ಆಗಲೇ 10 ನಿಮಿಷ ಆಯಿತು.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ:– ನೀವು ಮಂತ್ರಿಯಾದರೆ 50,000 ರೂ.ಗಳನ್ನು ಜಾಸ್ತಿ ಮಾಡುತ್ತೀರಿ. ಇನ್ನೊಬ್ಬರು ಬಂದಾಗ ಅವರು ಜಾಸ್ತಿ ಮಾಡುತ್ತಾರೆ, ನೀವು ಜನರಿಗೆ ಅಗತ್ಯತೆ, ಅವಶ್ಯಕತೆ ಇರುವಂತಹ ಔಷಧಿಗಳನ್ನು ಪೂರೈಸುತ್ತಿಲ್ಲ ಎನ್ನುವುದು ನನ್ನ ಪ್ರಶ್ನೆ , ಅದಕ್ಕೆ ಉತ್ತರ ಹೇಳಿ.

ಶ್ರೀ ಆರ್.ಅಶೋಕ್:– ಮಾನ್ಯ ಅಧ್ಯಕ್ಷರೆ, ಸ್ಥಳೀಯ ಮಟ್ಟದಲ್ಲಿ ಬರುವ ಬೇಡಿಕೆಗಳ ಅವಶ್ಯಕತೆಗೆ ತಕ್ಕಂತೆ ನಾವು ಔಷಧಿಗಳನ್ನು ಕೊಡುತ್ತಿದ್ದೇವೆ. ಆಕಸ್ಮಾತ್ ನಿಮ್ಮ ಜಿಲ್ಲೆ ಮತ್ತು ತಾಲ್ಲೂಕುಗಳಲ್ಲಿ ಏನಾದರೂ ತಪ್ಪಾಗಿದ್ದರೆ ಆ ಮಾಹಿತಿ ಕೊಟ್ಟರೆ ಅದನ್ನು ಸರಿಪಡಿಸಲಿಕ್ಕೆ ನಾವು ಸಿದ್ಧರಿದ್ದೇವೆ.

ಅಧ್ಯಕ್ಷರು:– ಮಾನ್ಯ ಎಸ್.ಎಸ್.ಪಾಟೀಲರು, ಈಗಾಗಲೇ 10 ನಿಮಿಷ ಆಗಿ ಹೋಯಿತು. ಮತ್ತೆ ಎಲ್ಲರೂ ಕೇಳಿದರೆ ಹೇಗೆ?

ಶ್ರೀ ಆರ್.ರೋಷನ್ ಬೇಗ್:– ಮಾನ್ಯ ಮಂತ್ರಿಗಳು ತಾಲ್ಲೂಕು ಮತ್ತು ಜಿಲ್ಲಾ ಆಸ್ಪತ್ರೆಗಳಿಗೆ ಔಷಧಿಗಳ ವಿತರಣೆ ಬಗ್ಗೆ ಏನು ಹೇಳಿದ್ದಾರೆ, ಊರುಗಳು ಬಿಡಿ, ಬೆಂಗಳೂರು ನಗರದಲ್ಲಿ ಬೋರಿಂಗ್ , **ವಾಣಿವಿಲಾಸ್** , ವಿಕ್ಟೋರಿಯಾ ಆಸ್ಪತ್ರೆಗಳಲ್ಲಿ ಮೆಡಿಸನ್ಸ್ ಸಿಗುತ್ತಿಲ್ಲ. ಲೈಫ್ ಸೇವಿಂಗ್ ಡ್ರಗ್ಸ್ ಅಲ್ಲಿ ಇಲ್ಲ .

ಶ್ರೀ ಆರ್.ಅಶೋಕ್:– ಮಾನ್ಯ ಸದಸ್ಯರು ಹೇಳುತ್ತಿರುವ ವಿಷಯ ಮೆಡಿಕಲ್ ಎಜುಕೇಷನ್‌ಗೆ ಬರುತ್ತದೆ, ನೀವು ಬೇರೆ ಪ್ರಶ್ನೆಯನ್ನು ಹಾಕಿ.

ಶ್ರೀ ಆರ್.ರೋಷನ್‌ಬೇಗ್:– ಮಾನ್ಯ ಮಂತ್ರಿಗಳು ನೀವು ನೋಡಿದರೆ ಅಲ್ಲಿ ಮೆಡಿಸಿನ್ಸ್ ಸಿಗುತ್ತದೆಂದು ಹೇಳುತ್ತಿದ್ದೀರಿ. ಬೆಂಗಳೂರು ನಗರದಲ್ಲೇ ಮೆಡಿಸಿನ್ಸ್ ಇಲ್ಲವೇ ಇಲ್ಲ. ಬೇರೆ ಕಡೆ ಎಲ್ಲಿ ಸಿಗುತ್ತದೆ. ಒಂದು ಲೈಫ್ ಸೇವಿಂಗ್ ಡ್ರಗ್ ಸಿಗುತ್ತಿಲ್ಲ. ಈಗ ಬೋರಿಂಗ್ ಆಸ್ಪತ್ರೆಗೆ ಹೋಗಿ ನೋಡಿ. ಅಲ್ಲಿನ ರೋಗಿಗಳಿಗೆ ಚೀಟಿ ಬರೆದು ಕೊಟ್ಟು ಹೊರಗಿನಿಂದ ಔಷಧಿ ತೆಗೆದುಕೊಂಡು ಬನ್ನಿ ಎಂದು ಹೇಳುತ್ತಾರೆ. when this is the situation in Bangalore city, ಬೇರೆ ಕಡೆ ದೇವರೇ ಕಾಪಾಡಬೇಕು.

ಶ್ರೀ ಆರ್.ಅಶೋಕ್:– ಮಾನ್ಯ ಸದಸ್ಯರು ಮೆಡಿಕಲ್ ಎಜುಕೇಷನ್ ಮಿನಿಸ್ಟರ್‌ಗೆ ಪ್ರಶ್ನೆಯನ್ನು ಹಾಕುವ ಮುಖಾಂತರ ಅಲ್ಲಿಂದ ವರದಿಯನ್ನು ತರಿಸಿಕೊಳ್ಳಬೇಕು.

ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಸಮುದಾಯ ಆರೋಗ್ಯ ಕೇಂದ್ರಗಳನ್ನಾಗಿ ಮೇಲ್ದರ್ಜೆಗೇರಿಸುವುದು

44 (216) ಶ್ರೀ ಪಾಟೀಲ್ ಎಸ್.ಎಸ್. (ಮುಂಡರಗಿ): ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗೆ ಉತ್ತರಿಸುವರೆ ?

ಅ) ಮುಂಡರಗಿ ಮತದಾರ ಕ್ಷೇತ್ರದಲ್ಲಿ ಇರುವ ಸಮುದಾಯ ಆರೋಗ್ಯ ಕೇಂದ್ರಗಳ ಸಂಖ್ಯೆ ಎಷ್ಟು ;

ಆ) ಸಮುದಾಯ ಆರೋಗ್ಯ ಕೇಂದ್ರಗಳು ಇರದಿದ್ದರೆ ಡಂಬಳ, ಬಾಗೇವಾಡಿ, ಲಕ್ಕುಂಡಿ ಮುಳಗುಂದ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನೇ ಸಮುದಾಯ ಆರೋಗ್ಯ ಕೇಂದ್ರಗಳನ್ನಾಗಿ ಮೇಲ್ದರ್ಜೆಗೆ ಏರಿಸಲಾಗುವುದೇ?

ಶ್ರೀ ಆರ್. ಅಶೋಕ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ) ಮುಂಡರಗಿ ಕ್ಷೇತ್ರದಲ್ಲಿ ಒಂದು ಸಮುದಾಯ ಆರೋಗ್ಯ ಕೇಂದ್ರವಿದೆ.

ಆ) ಮುಳಗುಂದ ಹಾಗೂ ಡಂಬಳ ಪ್ರಾ.ಆ. ಕೇಂದ್ರಗಳನ್ನು ಮೇಲ್ದರ್ಜೆಗೇರಿಸಲು ಪ್ರಸ್ತಾವನೆಗಳು ಬಂದಿದ್ದು ಮಾರ್ಗಸೂಚಿ ಪ್ರಕಾರ ಪರಿಶೀಲಿಸಿ ಕ್ರಮ ಕೈಗೊಳ್ಳಲಾಗುವುದು.

ಶ್ರೀ ಎಸ್.ಎಸ್.ಪಾಟೀಲ್:– ಮಾನ್ಯ ಅಧ್ಯಕ್ಷರೆ ಉತ್ತರವನ್ನು ಒದಗಿಸಿದ್ದಾರೆ. ಮುಂಡರಗಿ ಮತದಾರ ಕ್ಷೇತ್ರದಲ್ಲಿ ಇರುವ ಸಮುದಾಯ ಆರೋಗ್ಯ ಕೇಂದ್ರಗಳ ಸಂಖ್ಯೆ ಎಷ್ಟು ಎಂದು ಕೇಳಿದ್ದಕ್ಕೆ ಒಂದು ಸಮುದಾಯ ಆರೋಗ್ಯ ಕೇಂದ್ರವಿದೆ ಎಂದು ಹೇಳಿದ್ದೀರಿ ಅದು ಯಾವುದು? ಎಂದು ಹೇಳಬೇಕು. ಆ ನಂತರ ನಾನು ನಾಲ್ಕು ಪ್ರಶ್ನೆಗಳನ್ನು ಕೇಳಿದ್ದೆ ಅದರಲ್ಲಿ ಎರಡು ಪ್ರಶ್ನೆಗಳು ಮಾತ್ರ ಬಂದಿವೆ. ಮಾರ್ಗಸೂಚಿ ಪ್ರಕಾರ ಪರಿಶೀಲಿಸಿ ಕ್ರಮ ಕೈಗೊಳ್ಳಲಾಗುವುದು ಎಂದು ಹೇಳಿದ್ದೀರಿ, ಮಾರ್ಗಸೂಚಿ ಅಂದರೆ ಏನು? ಈಗ ಮಾಡಿದಂತಹ ಸಿ ಹೆಚ್ ಸಿಗಳನ್ನು ಕೂಡ ಮಾರ್ಗಸೂಚಿ ಪ್ರಕಾರ ಮಾಡಿದ್ದೀರಾ? ಎನ್ನುವುದರ ಬಗ್ಗೆ ಉತ್ತರ ಕೊಡಬೇಕು.